

## ವಾಟರ್‌ಪ್ರೂಫ್ ಪ್ರಸಾಧನ ಬಳಸಿ

ವಾತಾವರಣದಲ್ಲಿ ತೇವಾಂಶ, ತೇವಯುಕ್ತ ಗಾಳಿ, ಮಳೆಯ ಹನಿ ಇವೆಲ್ಲದರಿಂದ ತ್ವಚೆಗೆ ರಕ್ಷಣೆ ಬೇಕು, ಮೇಕಪ್ ಅಳಿಸದೆ ಇಡೀ ದಿನ ತಾಜಾತನ ಕಾಪಾಡಿಕೊಳ್ಳಬೇಕು. ಮುಖಕ್ಕೆ ಹಚ್ಚಿದ ಫೌಂಡೇಶನ್ ಅಥವಾ ಬೇಸ್‌ಮೆಂಟ್ ಕ್ರೀಮ್ ತೇವಕ್ಕೆ ಸಿಲುಕಿ ಮಾಸದಂತಿರಬೇಕು. ಹಾಗಾಗಿ ಮಳೆಗಾಲದಲ್ಲಿ ಆದಷ್ಟು ತೆಳುವಾದ ಮೇಕಪ್ ಮಾಡಿಕೊಳ್ಳಬೇಕು, ವಾಟರ್‌ಪ್ರೂಫ್ ಮೇಕಪ್‌ನಿಂದ ತಾಜಾತನ ಕಾಪಾಡಿಕೊಳ್ಳಬಹುದು. ಆಸ್ಸೆಸರೀಸ್ ಕೂಡ ನೀರಿನಲ್ಲಿ ತೋಯ್ದರೆ ಹಾಳಾಗದಂತಿರಲಿ.

# ಮಳೆಗಾಲದ ಉಡುಪುಗಳು ಹೇಗಿದ್ದರೆ ಚೆನ್ನ?

## ಸಿಂಥೆಟಿಕ್ ಬಟ್ಟೆಗಳನ್ನೇ ಆಯ್ದುಕೊಳ್ಳಿ

ಬಟ್ಟೆಯನ್ನು ಆಯ್ಕೆ ಮಾಡುವಾಗ ದಪ್ಪನೆಯ ಉಲ್ಲನ್, ತೆಳ್ಳನೆಯ ಕಾಟನ್‌ಗಳಿಗಿಂತ ಅತ್ಯಂತ ಸುಲಭದ ಆಯ್ಕೆ ಸಿಂಥೆಟಿಕ್. ಒದ್ದೆಯಾದಲ್ಲಿ ಒಣಗಲೂ ಸುಲಭ.

## ಕಡುಬಣ್ಣದ ಬಟ್ಟೆಗಳನ್ನು ಧರಿಸಿ

ಮಳೆಗಾಲದಲ್ಲಿ ಕೆಂಪು, ನೀಲಿ, ಕಂದು ಬಣ್ಣಗಳ ಬಟ್ಟೆಗಳ ಮೊರೆಹೋಗುವುದು ಜಾಣತನ. ಧರಿಸಿರುವ ಬಟ್ಟೆಯ ಮೇಲೆ ಅಪ್ಪಿತಪ್ಪಿ ಏನಾದರೂ ಕೆಸರಿನ ಹನಿಗಳು ರಾಚಿದರೆ ಅದರ ಕಲೆ ಸುಲಭದಲ್ಲಿ ಮಾಸುವುದಿಲ್ಲ. ಮಾತ್ರವಲ್ಲ, ತಿಳಿ ಅಥವಾ ಬಿಳಿಬಣ್ಣದ ಬಟ್ಟೆಗಳು ನೀರು ತಗಲಿದಂತೆ ಹೆಚ್ಚು ಪಾರದರ್ಶಕವೆನಿಸಿ ಇರುಸುಮುರುಸು ಉಂಟಾಗುತ್ತದೆ.

## ಥ್ರೀ ಫೋರ್ಥ್ ಉತ್ತಮ

ಪಾದದವರೆಗೆ ಇಳಿತಾಕುವ ಅಥವಾ ಸಡಿಲವಾದ ಬಟ್ಟೆಗಳಿಂದ ಆದಷ್ಟು ದೂರವಿರುವುದೊಳಿತು. ಕಚೇರಿಗಳಿಗೆ ಫಾರ್ಮಲ್ ಸ್ಕರ್ಟ್, ದೂರ ಪ್ರಯಾಣದ ಸಂದರ್ಭದಲ್ಲಿ ಮೊಣಕಾಲುವರೆಗಿನ, ಅಥವಾ ಥ್ರೀ ಫೋರ್ಥ್ ಬಟ್ಟೆಗಳನ್ನು ಆಯ್ದುಕೊಳ್ಳುವುದು ಸೂಕ್ತ. ಉದ್ದದ ವಸ್ತ್ರಗಳನ್ನು ಮಾತ್ರ ಧರಿಸುವವರಿಗೆ ಕುರ್ತಿ, ಸಿಂಥೆಟಿಕ್ ಲೆಗಿಂಗ್ಸ್ ಒಂದು ಉತ್ತಮ ಆಯ್ಕೆ.

## ಆ್ಯಪಲ್ ಕಟ್ ಟಾಪ್

ಈ ವರ್ಷದ ಮಳೆಗಾಲದ ಉಡುಗೆಗಳಲ್ಲಿ ಆ್ಯಪಲ್ ಕಟ್ ಟಾಪ್‌ಗಳು ಟ್ರೆಂಡಿಯಾಗಿವೆ. ಈ ಋತುವಿಗೆ ಇದು ಹೆಚ್ಚು ಸೂಕ್ತವಾಗಿದೆ. ಜೊತೆಗೆ ಮಳೆಗಾಲದ ಕೋಟ್ ಅಥವಾ ಜಾಕೆಟ್ ಮಾರುಕಟ್ಟೆಯಲ್ಲಿ ಲಭ್ಯ. ಇವು ಸೌಂದರ್ಯಕ್ಕೂ ಸೈ ಆಪ್ತರಕ್ಷಕನಂತೆಯೂ ಕೆಲಸ ಮಾಡುತ್ತದೆ.

## ದುಪಟ್ಟಾದಿಂದ ದೂರವಿರಿ

ಉದ್ದನೆಯ, ಅಗಲ, ಭಾರದ ದುಪಟ್ಟಾಗಳು ಅದೆಷ್ಟೋ ಬಾರಿ ಮಳೆಯ ಮಧ್ಯೆ ಕೊಡೆಯಿಂದಾಚೆಗೆ ಹಾರಿಯೋ, ಅದರ ತುದಿಯು ನೆಲದ ನೀರಿನಲ್ಲಿ ಎಳೆದಾಡಿದಂತಾಗಿಯೋ ವಿಪರೀತ ಕಿರಿಕಿರಿಯುಂಟುಮಾಡುವುದಿದೆ. ಹಾಗಾಗಿ ಇವುಗಳಿಂದ ದೂರವಿರುವುದು ಒಳಿತು. ಪ್ರಯಾಣ ಸಮಯದಲ್ಲಿ ದುಪಟ್ಟಾವನ್ನು ಕೊರಳಿನ ಸುತ್ತಲೂ ಆಲಂಕಾರಿಕವಾಗಿ ಬಳಸಬಹುದು.

## ಫ್ರೀ ಹೇರ್ ಬೇಡ

ಮಳೆಯಲ್ಲಿ ಹೊರನಡೆವಾಗ ಫ್ರೀ ಹೇರ್ ಬಿಡುವುದಕ್ಕಿಂತಲೂ ಒಟ್ಟು ಮಾಡಿ ಬನ್ ಅಥವಾ ಪೋನಿಟೇಲ್ ಹಾಕಿದರೆ ಉತ್ತಮ. ಇದು ಗಾಳಿ ಮಳೆಗೆ ಹಾರಾಡಿ ಒದ್ದೆಮುದ್ದೆಯಾದ ಕೂದಲಿನ ಅಸ್ತವ್ಯಸ್ತ ನೋಟವನ್ನು ತಪ್ಪಿಸುತ್ತದೆ. ಕೇಶರಾಶಿಯ ಆರೋಗ್ಯಕ್ಕೂ ಪೂರಕ.

## ತೆಳು ಮೇಕಪ್ ಸೂಕ್ತ

ಮಳೆಗಾಲದಲ್ಲಿ ಗಾಢ ವರ್ಣದ ಮೇಕಪ್‌ಗಿಂತ ತೆಳುವಾದ ಮೇಕಪ್‌ಗೆ ಆದ್ಯತೆ ನೀಡಿ. ನ್ಯೂಡ್ ಮೇಕಪ್ ಬಳಸಿ. ಆದರೆ ತುಟಿ ರಂಗು ಗಾಢವಾಗಿರಲಿ.

## ಕೋಲ್ಡ್ ಕ್ರೀಂ, ಲೋಷನ್

ಮಳೆ ಜತೆಗೇ ಬರುವ ಚಳಿಯಿಂದ ಚರ್ಮವನ್ನು ರಕ್ಷಿಸಲು ಕೋಲ್ಡ್ ಕ್ರೀಂ ಮತ್ತು ಲೋಷನ್ ಬಳಸಲೇಬೇಕು. ಎಣ್ಣೆ, ಬೆಣ್ಣೆ, ಕೆನೆ ಬಳಸಬಹುದು. ಅಲೊವೆರಾದಲ್ಲಿ ತಯಾರಿಸಿದ ಕ್ರೀಂ ಕೂಡ ಪರಿಣಾಮಕಾರಿ. ಇದು ಚರ್ಮದ ಒಳಪದರದಲ್ಲಿ ಸೇರಿಕೊಂಡಿರುವ ಕಲ್ಮಶಗಳನ್ನು ಹೊರಹಾಕಿ ಚರ್ಮವನ್ನು ಹೊಳಪು, ನಯಗೊಳಿಸುತ್ತದೆ.



## ಐಸ್‌ಕ್ಯೂಬ್ ಲೇಪನ

ಮೇಕಪ್‌ಗೂ ಮೊದಲು 5–10 ನಿಮಿಷ ಐಸ್‌ಕ್ಯೂಬ್‌ನಿಂದ ನಿಧಾನವಾಗಿ ಮುಖ ಉಜ್ಜಿ ನಂತರ ಮೇಕಪ್ ಮಾಡಿಕೊಳ್ಳಿ. ಒಣ ಮತ್ತು ಸಾಮಾನ್ಯ ಚರ್ಮದವರು ಟೋನರ್ ಬಳಸಿಯೂ ಮೇಕಪ್ ಮಾಡಿಕೊಳ್ಳಬಹುದು.